# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 898 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 13-12-2023 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

*****

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ವಕ್ಫ್ ಇಲಾಖೆ ವ್ಯಾಪ್ತಿಗೆ ಸೇರಿದ ಎಷ್ಟು ಆಸ್ತಿ ಇವೆ; (ವಿವರ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ ಒಟ್ಟು 4159 ವಕ್ಫ್ ಆಸ್ತಿಗಳಿದ್ದು, ಒಟ್ಟು 13590 ಎಕರೆ ಮತ್ತು 5148524.28 ಚದರ ಅಡಿ ವಿಸ್ತೀರ್ಣವಿರುತ್ತದೆ. |
| ಆ) | ಈ ಆಸ್ತಿಯಲ್ಲಿ ಎಷ್ಟು ಎಕರೆ ಜಮೀನು ಒತ್ತುವರಿಯಾಗಿದೆ; ಒತ್ತುವರಿಯಾಗಲು ಕಾರಣಗಳೇನು ; | ವಿಜಯಪುರ ಜಿಲ್ಲೆಯಲ್ಲಿ 6438 ಎಕರೆ 06 ಗುಂಟೆ ಮತ್ತು 44978 ಚದರ ಅಡಿ ಆಸ್ತಿಯು ಒತ್ತುವರಿಯಾಗಿರುತ್ತದೆ. ಹಲವಾರು ವಕ್ಫ್ ಆಸ್ತಿಗಳು ಭೂಸುಧಾರಣಾ ಕಾನೂನುಗಳಡಿ ಖಾಸಗಿ ವ್ಯಕ್ತಿಗಳಿಗೆ ಮಂಜುರಾಗಿರುತ್ತದೆ, ವಿವಿಧ ಸರ್ಕಾರಿ, ಅರೆ ಸರ್ಕಾರಿ ಇಲಾಖೆಗಳ ಅನಧಿಕೃತ ಒತ್ತುವರಿ, ಗುತ್ತಿಗೆ ಅವಧಿ ಮೀರಿ ಖಾಸಗಿ ವ್ಯಕ್ತಿ ಮತ್ತು ಸಂಸ್ಥೆಗಳು ವಕ್ಫ್ ಆಸ್ತಿಯಲ್ಲಿ ಅನಧಿಕೃತ ಕಬ್ಜೆ ಇತ್ಯಾದಿ ಕಾರಣಗಳಿಂದ ವಕ್ಫ್ ಆಸ್ತಿಗಳು ಒತ್ತುವರಿಯಾಗಿರುತ್ತವೆ. |
| ಇ) | ವಕ್ಫ್ ಆಸ್ತಿಯನ್ನು ಸಂರಕ್ಷಿಸಲು ಹಾಗೂ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? | ವಕ್ಫ್ ಆಸ್ತಿಯನ್ನು ಸಂರಕ್ಷಿಸಲು ಆಸ್ತಿಯ ಸುತ್ತಮುತ್ತಲು ತಂತಿ-ಬೇಲಿ ಮತ್ತು ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ಸರ್ಕಾರದಿಂದ ಅನುದಾನ ಮಂಜೂರು ಮಾಡಲಾಗುತ್ತಿದೆ ಹಾಗೂ ಒತ್ತುವರಿಯನ್ನು ತೆರವುಗೊಳಿಸಲು ವಕ್ಫ್ ಕಾಯ್ದೆ, 1995ರ ಕಲಂ-54ರ ಅಡಿಯಲ್ಲಿ ವಿವಿಧ ನ್ಯಾಯಾಧಿಕರಣ ಮತ್ತು ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. |

ಸಂಖ್ಯೆ: MWD 132 LMQ 2023

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

Scanned By Camera Scanner